# ಭಾಗ 1:

# ದೇವರ ಮಿತಿಯಿಲ್ಲದಿರುವಿಕೆ

**ದೇವರಲ್ಲಿ ನಮ್ಮ ವಿಶ್ವಾಸವು ದೇವರು ತನ್ನ ಬಗ್ಗೆ ಏನು ಹೇಳುತ್ತಾನೋ ಅದರಿಂದ ಬರುವುದು – ಆತನ ಬಗ್ಗೆ ಜನರು ಹೇಳುವದರಿಂದ ಬರುವದಿಲ್ಲ.**

ನಾವು ಯೋಚನೆ ಮಾಡುವಾಗ ನಾವು ಚಿತ್ರಗಳಲ್ಲಿ ಇಲ್ಲವೇ ಪದಗಳಲ್ಲಿ ಯೋಚಿಸುತ್ತೇವೆ. ಯಾವುದು ಮನಸ್ಸಿಗೆ ಬರುತ್ತದೆ ಎಂಬುದು ನಿಜವಾಗಿಯೂ ಮಹತ್ವದ್ದಲ್ಲ. ಯಾಕಂದರೆ ಚಿತ್ರಗಳು ಮತ್ತು ಪದಗಳು ಎರಡೂ ನಾವು ಹೇಳುವ ಇಲ್ಲವೇ ಗ್ರಹಿಸಲು ಪ್ರಯತ್ನಿಸುವಂಥದ್ದರ ಕೇವಲ ಸಂಕೇತಗಳಾಗಿವೆ. ಇವು ಪ್ರತಿದಿನದ ಜೀವಿತದ ಮಾರ್ಗದಲ್ಲಿ ಚೆನ್ನಾಗಿ ಕೆಲಸ ಮಾಡುತ್ತವೆ. ಹೀಗಿದ್ದರೂ ಯಾವುದು ಹುದುವಾದ ಸ್ಥಳ ಅಲ್ಲ ಎಂಬುದನ್ನು ವಿವರಿಸಲು ಪ್ರಯತ್ನಿಸುವಾಗ ನಮಗೆ ಬಹಳ ಸಲ ಕಠಿಣವಾಗುತ್ತದೆ. “ನನಗೆ ಅದು ತಿಳಿದದೆ, ಆದರೆ ಅದನ್ನು ನನಗೆ ಹೇಳಲಿಕ್ಕಾಗದು?” ಎಂದು ನಾವು ಎಷ್ಟುಸಲ ಹೇಳಿದ್ದೇವೆ. ಸಾಮಾನ್ಯವಲ್ಲದ್ದು ಹಾಗೂ ವ್ಯಾಪಕವಾದದ್ದು ಎರಡೂ ಆಗಿರುವಂಥದ್ದನ್ನು ನಾವು ವ್ಯವಹರಿಸುವಾಗ ಪರಿಸ್ಥಿತಿಯು ಹೆಚ್ಚು ತೀಕ್ಷವಾದದ್ದಾಗುತ್ತದೆ. ಅದು ಸಂಪೂರ್ಣವಾಗಿ ನಮ್ಮನ್ನು ನುಸುಳಿ ಹೋಗುವುದೆಂದು ಎಂಬಂತೆ ಭಯಪಡಿಸುತ್ತದೆ.

ಆದುದರಿಂದ ದೇವರ ಬಗ್ಗೆ ಮಾತಾಡುವುದು ಕಠಿಣವಾದದ್ದಾಗುತ್ತದೆ. ಸಾಮಾನ್ಯವಾದ ಸಂಭಾಷಣೆಯು - ಅನುದಿನದ ಅನುಭವ ಹಾಗೂ ಪರಿಚಿತ ಪದಗಳು ಮುಗಿದು ಹೋಗುವ ಮೊದಲು ನಾವು ಹೆಚ್ಚು ದೂರ ಹೋಗಲಾರೆವು. ನಮ್ಮ ಯೋಚನೆಗಳು ವಿಸ್ತರಿಸುವಾಗ ಹೆಚ್ಚು ವಿಶಾಲವಾದ ಮತ್ತು ಗ್ರಹಿಸಲು ಯೋಗ್ಯವಾದ ಪದಗಳನ್ನು ಉಪಯೋಗಿಸುವ ಅಗತ್ಯತೆಯನ್ನು ಹೊಂದುತ್ತೇವೆ. ಇದು ದೇವರ ಬಗ್ಗೆ ಚರ್ಚೆಯನ್ನು ಹೆಚ್ಚು ಉನ್ನತವಾದದ್ದನ್ನೂ “ದೈವ ಜ್ಞಾನ ಶಾಸ್ತ್ರ”ವುಳ್ಳದ್ದನ್ನೂ ಮಾಡಬೇಕಾಗುತ್ತದೆ. ನಾವು ವಿಚಿತ್ರವಾದ ನೆಲದ ಮೇಲೆ ನಿಂತುಕೊಂಡಿರುವದನ್ನು ಕಂಡುಕೊಳ್ಳುತ್ತೇವೆ. ಇದು ಕಹಿಸಿಹಿ ಸಮಸ್ಯೆಯನ್ನುಂಟು ಮಾಡುತ್ತದೆ. ಹೆಚ್ಚು ಹೆಚ್ಚು ಮಾತು ಇರಬಹುದು ಮತ್ತು ಕಡಿಮೆ ಕಡಿಮೆ ತಿಳುವಳಿಕೆ ಇರಬಹುದು.

ದೇವರು ತನ್ನ ಪ್ರಸನ್ನತೆ, ಜ್ಞಾನ ಹಾಗೂ ಬಲಕ್ಕೆ ಸಂಬಂಧಿಸಿ ಮಿತಿಯಿಲ್ಲದವನೆಂಬ ಬೈಬಲಿನ ನಂಬಿಕೆಯ ಬಗ್ಗೆ ಈ ಸಂದರ್ಭದಲ್ಲಿ ನಾವು ಚರ್ಚಿಸುವವರಾಗಿದ್ದೇವೆ. ಇದು ದೇವರ ಅಸ್ತಿತ್ವವನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. ಸೃಷ್ಟಿಯ ಬಗೆಗಿನ ಆದಿಕಾಂಡ ಗ್ರಂಥದಲ್ಲಿಯ ವಿವರಣೆಯು ದೇವರ ಅಸ್ತಿತ್ವವನ್ನು ಇಲ್ಲವೇ ವಾಸ್ತವಿಕತೆಯನ್ನು ಕುರಿತು ಚರ್ಚಿಸುವದಕ್ಕೆ ಹೆಚ್ಚು ಸಮಯ ಕಳೆಯುವದಿಲ್ಲ: “ಆದಿಯಲ್ಲಿ ದೇವರು ...” (ಆದಿಕಾಂಡ 1:1ಣೆ ಒತ್ತಿ ಹೇಳಿದ್ದು ನನ್ನದು). ಬೈಬಲು ಪ್ರಮುಖವಾಗಿ ದೇವರನ್ನು ಒಪ್ಪಿಕೊಳ್ಳುವ ನಿಲುವು ಉಳ್ಳದ್ದಾಗಿದೆ ಎಂದರ್ಥವಾಗುತ್ತದೆ. ಆತನಿಗಾಗಿ ಬೇಡಿಕೊಳ್ಳುವದಾಗಲಿ ಇಲ್ಲವೇ ಪ್ರತಿಪಾದಿಸಿಕೊಳ್ಳುವುದಾಗಲಿ ಆಗಿರುವದಿಲ್ಲ. ಪ್ರಾರಂಭದ ವಿಷಯದಂತೆ ದೇವರ ಅಸ್ತಿತ್ವದ ಸಂಗತಿಯೊಂದಿಗೆ ಬೈಬಲಿನ ಬರಹಗಾರರು ಆತನ ಸ್ವಭಾವವನ್ನು ವಿವರಿಸಲು ಸ್ವತಂತ್ರರಿದ್ದರು.

ಆತನ ಸ್ವಭಾವಕ್ಕೆ ಆಧಾರ ತತ್ವವಾಗಿ ಆತನ ಅಸ್ತಿತ್ವವಿದೆ. "*ಇರುವಾತನೇ ಆಗಿರುವಾತನು* ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ" ಎಂದು ಇಸ್ರಾಯೇಲ್ಯರಿಗೆ ಹೇಳಲು ದೇವರು ಉರಿಯುವ ಪೊದೆಯೊಳಗಿಂದ ಹೇಳಿದ್ದರಿಂದ ಮೋಶೆಯು ಇದನ್ನು ಕಂಡುಕೊಂಡನು (ವಿಮೋಚನಕಾಂಡ 3:14ಬಿಣಿ ಒತ್ತಿ ಹೇಳಿದ್ದು ನನ್ನದು). ಮೊದಲು ಹೀಗೆ ಗುರುತಿಸಿರುವುದಿಲ್ಲ (ವಿಮೋಚನಕಾಂಡ 6:2, 3). ಈ ಸತತವಾದ ಸ್ವಯಂ - ಅಸ್ತಿತ್ವದಲ್ಲಿರುವ ದೇವರು ಬೈಬಲಿನ ಬರಹಗಾರರಿಗೆ ತನ್ನ ಪ್ರಸನ್ನತೆಯಲ್ಲಿ, ಜ್ಞಾನದಲ್ಲಿ ಮತ್ತು ಬಲದಲ್ಲಿ ಮಿತಿಯಿಲ್ಲದವನಂತೆ ಪ್ರಕಟಿಸಲ್ಪಟ್ಟನು (ಕೀರ್ತನೆ 139:1-12ಣಿ ಯೆರೆಮೀಯ 32:17ಣಿ ಮಾರ್ಕ 10:27). ಆದುದರಿಂದ ಈಗ ಈ ಮೂರು ಗುಣಲಕ್ಷಣಗಳನ್ನು ಯೋಚಿಸುವೆವು.